Tumbe Group of International Journal
A Peer Reviewed Multidisciplinary Journal
ISSN: 2581-8511
Volume- 3
Issue-1
January-April: 2020

# 18ನೇ ಶತಮಾನದ ಪಾವಗಡ ಪಾಳೇಗಾರರು

**ಡಾ. ಪ್ರಸನ್ನ**
ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ.

## ಪ್ರಸ್ತಾವನೆ

ಮನೆತನದ ಮೂಲವನ್ನು ಹುಡುಕುವುದು ಇತಿಹಾಸಕರರಿಗೆ ಒಂದು ಕುತೂಹಲಕಾರಿ ವಿಷಯವಾಗಿರುತ್ತದೆ. ಕರ್ನಾಟಕದ ವಿವಿಧ ಕಡೆ ತಲೆಎತ್ತಿದ ಸಣ್ಣಪುಟ್ಟ ಮನೆತನಗಳ ಮೂಲ ಪುರುಷರ ಬಗೆಗೂ ಸ್ಪಷ್ಟವಾಗಿ ಏನನ್ನು ಹೇಳಲು ಅಸಾಧ್ಯವಾಗುತ್ತದೆ ಆದರೆ ವಿಜಯನಗರ ಸಾಮ್ರಾಜ್ಯದ ಆಡಳಿತಾವದಿಯಲ್ಲಿ ಉದಯಿಸಿದ ಚಿಕ್ಕಪುಟ್ಟ ರಾಜಮನೆತನಗಳ ಉಗಮದ ಬಗೆಗೆ ಮಾತನಾಡುವಾಗ "ವಿಜಯನಗರ ಸಾಮ್ರಾಜ್ಯದ ಸ್ವರೂಪದ ಚೌಕಟ್ಟಿನೊಳಗೆ ಅವುಗಳ ಹುಟ್ಟ ಬೆಳವಣಿಗೆಗಳು ಅಂತರ್ಗತವಾಗಿದ್ದವು ಎಂಬ ಅಂಶವನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ" ಈ ನಾಯಕ ಮನೆತನಗಳು ಅಸ್ತಿತ್ವಕ್ಕೆ ಬಂದದ್ದು ವಿಜಯನಗರ ವಿಜಯನಗರೋತ್ತರ ಕಾಲದಲ್ಲಿ ಮತ್ತು ಆ ಚಕ್ರವರ್ತಿಗಳ ಅನುಮತಿಯಿಂದ ಎಲ್ಲೆಲ್ಲಿ ಕೋಟೆಗಳನ್ನು ಕಟ್ಟಲು ಅನುಕೂಲಗಳಿದ್ದುವೋ ಅಲ್ಲಲ್ಲಿ ಇಂತಹ ಮನೆತನಗಳು ಕಾಣಿಸಿಕೊಂಡವು ವಿಜಯನಗರ ಚಕ್ರವರ್ತಿ ಪೆನುಗೊಂಡಯಲ್ಲಿ ವೆಂಕಟಪತಿ ರಾಯನ ಆಳ್ವಿಕೆ ಮಾಡುತ್ತಿದ್ದ ಸಂಧರ್ಭದಲ್ಲಿ (1586-1614) ಉದಯಿಸಿದ್ದು ವೈಶಿಷ್ಟ ಪೂರ್ಣವಾಗಿದೆ. ಪಾವಗಡ ಕೋಟೆಯನ್ನು ಕಟ್ಟುವವರೆಗೆ ಈ ಪಾವಗಡ ಪಾಳೆಪಟ್ಟಿ ಹೆಚ್ಚು ಪ್ರವರ್ಧಮಾನಕ್ಕೆ ಬರಲಿಲ್ಲ. ಪಾವಗಡ ಸುತ್ತಮುತ್ತಲಿನ ಸಂಪನ್ಮೂಲಗಳನ್ನು ತಮ್ಮದಾಗಿಸಿಕೊಂಡ ಆ ಮನೆತನದ ಆರಂಭ ನಾಯಕರು ವೆಂಕಟಪತಿರಾಯನ ಕಾಲದಿಂದೀಚೆಗೆ ಪ್ರಖ್ಯಾತದಾರರು ಆದ್ದರಿಂದ ಈ ಪಾಳೆಪಟ್ಟು ವಿಜಯನಗೋರತ್ತರ ಕಾಲದಲ್ಲಿ ಉದಯಿಸಿದ್ದು ಸ್ಪಷ್ಟವಾಗಿದೆ ಈಗಾಗಲೇ ಇದರ ಬಗ್ಗೆ ಸಂಶೋಧಕರಾದ ಡಾ|| ಡಿ.ಎನ್. ಯೋಗಿಶ್ವರಪ್ಪನವರು ದೀರ್ಘವಾದ ಲೇಖನವೊಂದರಲ್ಲಿ ಸ್ಪಷ್ಟಪಡಿಸಿದ್ದಾರೆ.

**ಕೀ ವರ್ಡ್:** ಪಾವಗಡ ಪಾಳೇಗಾರರು, ತಿಮ್ಮಪ್ಪ ನಾಯಕ, ಜಾತಿ ಸಂಘರ್ಷ, ಪೆದ್ದ (ದೊಡ್ಡ) ತಿಮ್ಮಪ್ಪನಾಯಕ, ಚಿಕ್ಕವೆಂಟಕಟಪತಿ.

## ಪಿಠೀಕೆ

ಪಾವಗಡ ಪಾಳೆಪಟ್ಟಿನ ಸ್ಥಾಪನೆ ಹಾಗೂ ಆ ಸ್ಥಾಪಕನ ಮೂಲದ ಬಗ್ಗೆ ಈಗಾಗಲೇ ಹಲವು ಅಧ್ಯಯನಗಳು ನಡೆದಿವೆ. ಆ ಅಧ್ಯಯನಗಳಲ್ಲಿ ಒಮ್ಮತವಿಲ್ಲದಿರುವುದು ಕಂಡು ಬರುತ್ತಿದೆ. ನನಗೆ ಇತ್ತೀಚೆಗೆ 1801ರಲ್ಲಿ ಮೆಂಕಜಿ ರಚಿಸಿದ್ದ ಆಂಗ್ಲ ಕೈಪಿಯತು ದೊರೆತಿದ್ದು ಅದು ಈ ಎಲ್ಲ ಸಮಸ್ಯೆಗೆ ಉತ್ತರ ಕೊಡುವಂತಿದೆ. ಅಲ್ಲದೆ ಪಾವಗಡದಲ್ಲಿ ದೊರತಿರುವ ಕನ್ನಡ ಭಾಷೆಯ ದಾಖಲೆಯೊಂದು ಸಂಶೋಧನ ಸಮಯದಲ್ಲಿ ನನಗೆ ದೊರಕಿದ್ದು, ಅದು ಕೂಡ ಈ ಸ್ಥಾಪನೆಯ ಬಗ್ಗೆ ಹಾಗೂ ಅವನ ಮೂಲದ ಬಗೆಗೆ ಮೆಂಕಜಿಯ ಅಭಿಪ್ರಾಯವನ್ನು ಅನುಮೋದಿಸುತ್ತದೆ. ಆದ್ದರಿಂದ ನಾನು ಈ ಎರಡು ದಾಖಲೆಗಳನ್ನು ಆಧಾರವಾಗಿಟ್ಟುಕೊಂಡು ಮತ್ತು ಪಾವಗಡ ಭಾಗದಲ್ಲಿ ದೊರಕಿರುವ ಜಾನಪದ ಕೃತಿಗಳನ್ನು ಪೂರಕವಾಗಿ ಬಳಸಿಕೊಂಡು ಅದರ ಮೂಲ ಹಾಗೂ ಪಾಳೆಪಟ್ಟಿನ ಸ್ಥಾಪನೆಯ ಬಗೆಗೆ ಅಧ್ಯನ ಮಾಡಲು ಪ್ರಯತ್ನಿಸಿದ್ದೇನೆ.

1801ರ ಮೆಂಕಜಿಯ ಅಪ್ರಕಟಿತ ಆಂಗ್ಲ ದಾಖಲೆಯ ಪ್ರಕಾರ ಪಾವಗಡ ನಾಯಕ ಮನೆತನದ ಮೂಲಪುರುಷನಾದ ಬಲ್ಲಪ್ಪನಾಯಕನು ಆರಂಭದಲ್ಲಿ ಅಂದರೆ ಪಾವಗಡ ನಾಯಕರ ರಾಜ್ಯವನ್ನು ಸ್ಥಾಪನೆ ಮಾಡುವುದರ ಮೊದಲು ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಗುತ್ತಿಯಲ್ಲಿ ನೆಲೆಸಿದ್ದನು. ಇವನಿಗೆ ಅಜ್ಜಪ್ಪನಾಯಕ ಮತ್ತು ತಿಮ್ಮಪ್ಪನಾಯಕ ಎಂಬ ಸೋದರರು ಇದ್ದರು ಈ ಸೋದರರು ಗುತ್ತಿಯಿಂದ ವಲಸೆ ಹೊರಟು ಇಂದಿನ ಚಿಕ್ಕಬಳ್ಳಾಪುರ ಪ್ರಾಂತ್ಯಕ್ಕೆ ಬರುತ್ತಾರೆ. ಆದ್ದರಿಂದ ಬಲ್ಲಪ್ಪನಾಯಕನು ಪಾಳೆಪಟ್ಟುವಿನ ಮೂಲಪುರುಷ ಗುತ್ತಿಯಿಂದ ಬಂದವನಾದ್ದರಿಂದ ಅಲ್ಲಿನ ಭಾಷೆ ತೆಲುಗು. ಆದ್ದರಿಂದ ಅವನು ತೆಲುಗು ಮೂಲದವನೆಂದು ಹೇಳಬಹುದು.

ಈ ಪಾಳೆಪಟ್ಟು ಸ್ಥಾಪನೆಯಾದದ್ದು ಬಲ್ಲಪ್ಪನಾಯಕನಿಂದ. ಅವನ ಮೂಲಸ್ಥಾನ ಗುತ್ತಿ ಆದ್ದರಿಂದ ಇವನು ತೆಲುಗು ಮೂಲದವನಾಗಿದ್ದು, ಕನ್ನಡ ಪ್ರದೇಶಕ್ಕೆ ಬಂದು ಈ ಪಾಳೆಪಟ್ಟಿನಲ್ಲಿ ತನ್ನ ಸಾಮರ್ಥ್ಯ ಪ್ರದರ್ಶಿಸಿ ವಿಜಯನಗರ ಚಕ್ರವರ್ತಿಗಳ ವಿಶ್ವಾಸವನ್ನು ಗಳಿಸಿಕೊಂಡು ಸ್ಥಾಪಿಸಿದನೆಂದು ಸ್ಪಷ್ಟಪಡಿಸಬಹುದು.

ಈ ಮನೆತನದಲ್ಲಿ ಹತ್ತು ಪಾಳೇಗಾರರು ಆಳ್ವಿಕೆ ನಡೆಸಿದ್ದಾರೆ. (175 ವರ್ಷಗಳ ಕಾಲ) ಅದರಲ್ಲಿ ಹದಿನೇಂಟನೇ ಶತಮಾನದ ಪಾಳೇಗಾರರನ್ನ ಈ ಕೆಳಕಂಡಂತೆ ಚರ್ಚಿಸಬಹುದು.

**ತಿಮ್ಮಪ್ಪ ನಾಯಕ 1700 : 1744**

ತಾಳಪ್ಪನಾಯಕ ರೋಗಪೀಡಿತನಾಗಿ ಮರಣ ಹೊಂದಿದನು. ಅವನಿಗೆ ತಿಮ್ಮಪ್ಪನಾಯಕ ಎಂಬ ಮಗನಿದ್ದನು. ಇವನ ತಾತನಾಗಿದ್ದ ತಿಮ್ಮಪ್ಪನಾಯಕನು ತನ್ನ ದೊಡ್ಡಪ್ಪನಾದ ಬಲ್ಲಪ್ಪ ಹಾಗೂ ಆತನ ಮಗನಾದ ತಿಮ್ಮಪ್ಪನನ್ನು ಬಂಧಿಸಿ ಸೆರೆಯಲ್ಲಿಟ್ಟಿದ್ದನು. ಅವರು ಅಲ್ಲಿಯೇ ಮರಣ ಹೊಂದಿದ್ದರು. ಇವನ ತಂದೆ ತಾಳಪ್ಪನಾಯಕ ರೋಗಪೀಡಿತನಾಗಿ ಮರಣ ಹೊಂದಿದ ಮೇಲೆ ತಿಮ್ಮಪ್ಪನಾಯಕನು ತನ್ನ ಎಲ್ಲ ಸಂಬಂಧಿಕರ, ಪ್ರಜೆಗಳ, ಮುಖ್ಯ ಅಧಿಕಾರಿಗಳ ಒಪ್ಪಿಗೆಯನ್ನು ಪಡೆದುಕೊಂಡು ಕ್ರಿ.ಶ. 1700ರಲ್ಲಿ ಪಾವಗಡ ಸಂಸ್ಥಾನಕ್ಕೆ ಅಧಿಕೃತವಾಗಿ ಪಟ್ಟಕ್ಕೆ ಬಂದನು. ಇವನು ಇನ್ನೂ ಯುವಕನಾಗಿದ್ದು 44 ವರ್ಷಗಳ ಕಾಲ (ಅಂದರೆ 1744ರವರೆಗೆ) ಆಳ್ವಿಕೆ ಮಾಡಿದನೆಂದು ಹೇಳಲಾಗಿದೆ. ಶಾಂತಿಪ್ರಿಯ ವ್ಯಕ್ತಯಾಗಿದ್ದ ಈತನು ಬಡವರನ್ನು ಪ್ರೀತಿಸುತ್ತಾ ಬುದ್ಧಿವಂತರಿಗೆ ಆಶ್ರಯದಾತನಾಗಿದ್ದನು. ತನ್ನ ರಾಣಿಯಾದ ವೆಂಕಟಮ್ಮನಿಂದ ಪೆದ್ದಾತಿಮ್ಮಪ್ಪನಾಯಕ, ಚಿಕ್ಕತಿಮ್ಮಪ್ಪನಾಯಕ ಮತ್ತು ಚಿಕ್ಕವೆಂಕಟಪತಿನಾಯಕ ಎಂಬ ಮೂರು ಮಕ್ಕಳನ್ನು ಪಡೆದಿದ್ದನು. ಇವರಲ್ಲಿ ಹಿರಿಯವನಾದ ಪೆದ್ದ (ದೊಡ್ಡ) ತಿಮ್ಮಪ್ಪನಾಯಕನು ಬಿಲ್ಲು ವಿದ್ಯೆಯಲ್ಲಿ ಪ್ರವೀಣನಾಗಿದ್ದನು. ಉತ್ತಮ ದೇಹದಾರ್ಢ್ಯವನ್ನು ಹೊಂದಿದ್ದ ಈತನಿಗೆ ಶಸ್ತ್ರವಿದ್ಯೆಗಳೆಲ್ಲಾ ಕರಗತವಾಗಿದ್ದವು. ಇವನು ಬೆಳೆದು ದೊಡ್ಡವನಾದ ಮೇಲೆ ಅವನಷ್ಟೇ ಸುಂದರವಾದ ಹುಡುಗಿಯೊಂದಿಗೆ ವಿವಾಹ ಮಾಡಲು ಆತನ ತಂದೆ ತಿಮ್ಮಪ್ಪನಾಯಕನು ಪ್ರಯತ್ನ ಮಾಡತೊಡಗಿದನು.

**ಜಾತಿ ಸಂಘರ್ಷ**

ಪಾವಗಡ ಸಂಸ್ಥಾನದ ಸನಿಹದಲ್ಲೇ ಇದ್ದ ರಾಜವೆಂಟ್ರಿಯ ಗೌಡನಾದ ಚಿಕ್ಕಪ್ಪಗೌಡನಿಗೆ ಸುಂದರವಾದ ಮಗಳಿದ್ದಳು. ಈ ಕನ್ಯೆಯೇ ತಕ್ಕವಳೆಂದು ಯೋಚಿಸಿ ವಿವಾಹದ ಪ್ರಸ್ತಾಪದ ಸಂದೇಶವನ್ನು ಚಿಕ್ಕಪ್ಪಗೌಡನಿಗೆ ಕಳುಹಿಸಿದನು. ಪಾವಗಡದ ಆಂಗ್ಲ ಕೈಫಿಯತ್ತು ಅವನು ಕೊಟ್ಟ ಉತ್ತರವನ್ನು ಈ ರೀತಿ ದಾಖಲಿಸಿದೆ "ನೀವು ಯರ್ರಗೊಲ್ಲ ಜಾತಿಗೆ ಸೇರಿದವರು, ನಾವು ಬೇರೆ ಜಾತಿಯವರು. ಯಾರಾದರೂ ಮತ್ತೊಂದು ಜಾತಿಗೆ ಸೇರಿದವರೊಂದಿಗೆ ವಿವಾಹ ಸಂಬಂಧ ಬೆಳೆಸಲು ಸಾಧ್ಯವೇ? ನಾಯಿಯ ಮೊಲೆಯಲ್ಲಿ ಹಾಲಿದ್ದರೇನು? ಅದು ನಾಯಿಗೆ ಮಾತ್ರ ಸೀಮಿತ" ಈಗಾಗಲೇ ಆರಂಭದಲ್ಲಿ ತಿಳಿಸಿರುವಂತೆ ರಾಜವೆಂಟ್ರಿಯ ಗೌಡರು ಕುಂಚಿಟಿಗರ ಜನಾಂಗಕ್ಕೆ ಸೇರಿದವರಾಗಿದ್ದು ತನ್ನ ಮಗಳನ್ನು ಗೊಲ್ಲ ಜನಾಂಗದ ತಿಮ್ಮಪ್ಪನಾಯಕ ಮಗ ಪೆದ್ದ ತಿಮ್ಮಪ್ಪನಾಯಕನಿಗೆ ವಿವಾಹ ಮಾಡಿಕೊಡಲು ಒಪ್ಪಲಿಲ್ಲ. ಇಲ್ಲಿ ಮತ್ತೊಮ್ಮೆ ಜಾತಿ ಸಂಘರ್ಷವೇರ್ಪಡುತ್ತದೆ.

ರಾಜವೆಂಟ್ರಿಗೌಡನ ಮಾತುಗಳಿಂದ ಕೆರಳಿದ ತಿಮ್ಮಪ್ಪನಾಯಕನು ಅವನ ಮೇಲೆ ಆಕ್ರಮಣ ಮಾಡಿ ಆ ಪ್ರದೇಶವನ್ನು ಕೊಳ್ಳೆ ಹೊಡೆದನು, ಚಿಕ್ಕಪ್ಪಗೌಡನನ್ನು ಸೆರೆಹಿಡಿದು ಪಾವಗಡಕ್ಕೆ ಕರೆತಂದು ಕಾರಾಗೃಹದಲ್ಲಿ ಇಟ್ಟನು. ಕೆಲದಿನಗಳ ನಂತರ ಅವನನ್ನು ಬಿಡುಗಡೆಗೊಳಿಸಿ ರಾಜವೆಂಟ್ರಿಯಲ್ಲಿ ಪುನರ್ ಪ್ರತಿಷ್ಠಾಪಿಸಿದನು. ತನ್ನ ಮಗನ ಈ ವಿವಾಹ ಮುರಿದುಬಿದ್ದ ನಂತರ, ತನ್ನ ಪತ್ನಿಯ ಸಂಬಂಧಿಕನಾದ ಅಗಸನಪಾಳ್ಯದ ದಾಸಪ್ಪನ ಮಗಳಾದ ಅಚ್ಚಮ್ಮ ಎಂಬುವಳನ್ನು ತನ್ನ ಮಗನೊಂದಿಗೆ ವಿವಾಹ ಮಾಡಿಸಿದನು. ಇವಳನ್ನು ಲಕ್ಷ್ಮಮ್ಮ ಎಂದೂ ಕರೆಯುತ್ತಿದ್ದರು. ಎರಡನೇ ಮಗನಾದ ಚಿನ್ನತಿಮ್ಮಪ್ಪನಾಯಕನಿಗೆ ತನ್ನ ದಳವಾಯಿಯಾದ ಚಂದ್ರಯ್ಯನ ಮಗಳಾದ ಸಂಜೀವಮ್ಮ ಎಂಬುವಳನ್ನು ವಿವಾಹ ಮಾಡಿಸಿದನು.

**ಪೆದ್ದ (ದೊಡ್ಡ) ತಿಮ್ಮಪ್ಪನಾಯಕ (ಕ್ರಿ. ಶ. 1744 – 1774)**

ತಿಮ್ಮಪ್ಪನಾಯಕನ ಮರಣದ ನಂತರ ಅವನ ಹಿರಿಯಪುತ್ರ ಪೆದ್ದತಿಮ್ಮಪ್ಪ ನಾಯಕ ಕ್ರಿ.ಶ. 1745 ರ ರಕ್ತಾಕ್ಷಿ ಸಂವತ್ಸರದಲ್ಲಿ ಅಧಿಕಾರಕ್ಕೆ ಬಂದನು. ಪಾವಗಡವನ್ನಾಳಿದ ನಾಯಕರುಗಳಲ್ಲಿ ಅಗ್ರಗಣ್ಯನಾದ ಈತನು ಅನೇಕ ಜನೋಪಯೋಗಿ ಕೆಲಸಗಳನ್ನು ಮಾಡುತ್ತಾ ಪ್ರಸಿದ್ಧಯಾಗಿದ್ದಾನೆ. ನೀರಾವರಿಗೆ ಪ್ರೋತ್ಸಾಹ ನೀಡಿ ಬೊಮ್ಮತನಹಳ್ಳಿ ಬಳಿ ಗೌರಸಮಮೇಟಿ ಮತ್ತು ನಲಿಗೇನಪಳ್ಳಿ ಬಳಿ ಕೆರೆಗಳನ್ನು ನಿರ್ಮಿಸಿ ಕೃಷಿಯನ್ನು ವಿಸ್ತಾರ ಮಾಡಿದನು. ಗೌರಸಮಮೇಟಿ ಕೆರೆಯ ಬಳಿ ಒಂದು ಹೊಸ ಗ್ರಾಮವನ್ನು ಸ್ಥಾಪಿಸಿ ಅದಕ್ಕೆ ತಿಮ್ಮಪ್ಪನಾಯಕನಹಳ್ಳಿ ಎಂದು ನಾಮಕರಣ ಮಾಡಿದನು.

ತಿಮ್ಮಪ್ಪನಾಯಕನ ಕಾಲದಲ್ಲಿ ಮರಾಠರು ಆಕ್ರಮಣ ಮಾಡಿ ಪಾವಗಡ ಪಾಳೆಯಪಟ್ಟಿನ ಕೆಲವು ಪ್ರಾಂತ್ಯಗಳನ್ನು ವಶಪಡಿಸಿಕೊಂಡಿದ್ದರು. ಅವುಗಳನ್ನು ಪುನಃ ಪಡೆದುಕೊಳ್ಳಲು ಪ್ರಯತ್ನಿಸಿದ ದೊಡ್ಡ (ಪೆದ್ದ) ತಿಮ್ಮಪ್ಪನಾಯಕನು ಸೇನೆಯನ್ನು ಸಂಗ್ರಹಿಸಿ ಹಠಾತ್ತನೆ ದಾಳಿ ಮಾಡಿದನು. ಆ ಪ್ರಾಂತ್ಯದಲ್ಲಿದ್ದ ಮರಾಠ ಅಧಿಕಾರಿಗಳನ್ನು ಸೋಲಿಸಿ ಅವರಿಂದ ಗುಮ್ಮಗಟ್ಟ, ವಿರೂಪಸಂದ್ರ, ಮಾದೇರಾಜೊಂಡಪಳ್ಳಿ, ದೊಮ್ಮತುಮರಿ, ನೇರಳೆಕುಂಟೆ, ಚೇಲಾಪುರಂ ಎಂಬ ಊರುಗಳನ್ನು ವಶಪಡಿಸಿ ಕೊಂಡನು. ಈ ಗ್ರಾಮಗಳು ಹಲವಾರು ವರ್ಷಗಳಿಂದ ಪಾವಗಡ ನಾಯಕರ ಅಧೀನದಲ್ಲಿದ್ದವು. ಆದರೆ ಮರಾಠರು ಅವುಗಳನ್ನು ವಶಪಡಿಸಿಕೊಂಡು ಆಳುತ್ತಿದ್ದರು. ಪಾವಗಡ ನಾಯಕರಿಂದ ಸೋತು ಅವಮಾನಿತರಾದ ಮರಾಠ ಅಧಿಕಾರಿಗಳು ಅಧಿಕ ಸೈನ್ಯದೊಂದಿಗೆ ಸೋಲಿನ ಸೇಡನ್ನು ತೀರಿಸಿಕೊಳ್ಳಲು ಪಾವಗಡ ಕೋಟೆಯ ಮೇಲೆ ಆಕ್ರಮಣ ಮಾಡಿದರು. ಪೇಟೆಯನ್ನು ಲೂಟಿಗೈದು ದೊಡ್ಡತಿಮ್ಮಪ್ಪನಾಯಕರನನ್ನು ಸೆರೆಹಿಡಿದರು. ನಂತರ ಅವನ ಕಿರಿಯ ಸಹೋದರ ಚಿಕ್ಕವೆಂಕಟಪತಿನಾಯಕನನ್ನು ಅಧಿಕಾರದಲ್ಲಿ ಕುಳ್ಳಿರಿಸಿದರು.

**ಚಿಕ್ಕವೆಂಟಕಟಪತಿ**

ಚಿಕ್ಕವೆಂಕಟಪತಿಯು ಅಧಿಕಾರವನ್ನು ಪಡೆದುಕೊಂಡ ಮೇಲೆ ಮರಾಠರ ಸೆರೆಯಿಂದ ತನ್ನ ಅಣ್ಣನಾದ ದೊಡ್ಡತಿಮ್ಮಪ್ಪನಾಯಕನನ್ನು ಬಿಡಿಸುವ ಪ್ರಯತ್ನವನ್ನು ಮಾಡತೊಡಗಿದನು. ಇದಕ್ಕೋಸ್ಕರ ಅವನು ಮೈಸೂರಿನ ಸರ್ವಾಧಿಕಾರಿ ಹೈದರಾಲಿಯ ಬಳಿ ಹೋಗಿ ನಿವೇದನೆ ಮಾಡಿಕೊಮಡು, ತಾನು ಮೈಸೂರಿಗೆ ನಿಷ್ಠೆಯಿಂದ ಇರುವುದಾಗಿ ಭರವಸೆ ನೀಡಿ, ವಾರ್ಷಿಕ 10 ಸಾವಿರ ರೂಗಳ ನಜರ್ ನ್ನು (ಕಾಣಿಕೆ) ನೀಡುವ ಒಪ್ಪಂದಕ್ಕೆ ಸಹಿ ಹಾಕಿದನು. ಇದರಿಂದ ಸಂಪ್ರೀತನಾದ ಹೈದರಾಲಿಯು ಮಧ್ಯಸ್ಥಿಕೆ ವಹಿಸಿ ಮರಾಠರ ಸೆರೆಯಲ್ಲಿದ್ದ ದೊಡ್ಡತಿಮ್ಮಪ್ಪನಾಯಕನನ್ನು ಬಿಡುಗಡೆಗೊಳಿಸಿದನು. ನಂತರ ಚಿಕ್ಕವೆಂಕಟಪತಿನಾಯಕನು ತನ್ನ ಅಣ್ಣನಿಗೆ ಅಧಿಕಾರವನ್ನು ಬಿಟ್ಟುಕೊಟ್ಟು ಅವನಿಗೆ ಸಹಾಯಕನಾಗಿ ಕೆಲಸ ಮಾಡಿದನು. ಹೀಗೆ ಸಹೋದರರ ಮಧ್ಯೆ ಉತ್ತಮ ಭಾಂದವ್ಯವಿದ್ದುದು ಗೊತ್ತಾಗುತ್ತದೆ. ಇಬ್ಬರೂ ಪಾವಗಡ ಪಾಳೆಯಪಟ್ಟಿನ ಔನ್ನತ್ಯಕ್ಕಾಗಿ ಕ್ರಿ.ಶ. 1774ರವರೆಗೂ ಆಳ್ವಿಕೆ ಮಾಡಿದರು. ದೊಡ್ಡತಿಮ್ಮಪ್ಪನಾಯಕನು ಕ್ರಿ.ಶ. 1774ರಲ್ಲಿ ಮರಣ

ಹೊಂದಿದನು. ಇವನಿಗೆ ಲಕ್ಷ್ಮಮ್ಮ ಮತ್ತು ರಾಮಚಂದ್ರಮ್ಮ ಎಂಬ ಇಬ್ಬರು ಪತ್ನಿಯರು, ಇಬ್ಬರೂ ಪುತ್ರರೂ ಇದ್ದರು ಎಂದು ಆಂಗ್ಲ ಕೈಫಿಯತ್ತು ತಿಳಿಸುತ್ತದೆ.

## ಹೈದರಾಲಿಯ ಆಕ್ರಮಣ

ದೊಡ್ಡತಿಮ್ಮಪ್ಪನಾಯಕ ಮರಣಹೊಂದಿದ ನಂತರ ಅವನ ಹಿರಿಯ ಮಗನಾದ ಪೆದ್ದತಿಮ್ಮಪ್ಪನಾಯಕನು ಕ್ರಿ.ಶ. 1774ರ ವಿಜಯ ಸಂವತ್ಸರ ಕಾರ್ತಿಕಮಾಸದ ದಿನಾಂಕ 7 ಶುಕ್ರವಾರದಂದು ಅಧಿಕಾರ ವಹಿಸಿಕೊಂಡನು. ಇದೇ ಸಮಯದಲ್ಲಿ ಮೈಸೂರಿನಲ್ಲಿ ಹೈದರಾಲಿಯು ಸರ್ವಾಧಿಕಾರಿಯಾಗಿದ್ದು ಸಣ್ಣಪುಟ್ಟ ಪಾಳೆಯಪಟ್ಟುಗಳ ವಿರೋಧಿಯಾಗಿದ್ದನು. ಹೈದರಾಲಿ ಏಳಿಗೆಗೆ ಬರುವ ಮೊದಲು ಮರಾಠರು ದಕ್ಷಿಣ ಕರ್ನಾಟಕದ ಮೇಲೆ ದಾಳಿಮಾಡಿ ಪಾಳೆಯಪಟ್ಟುಗಳನ್ನು ಸೂರೆಗೈದು ತಮ್ಮ ಅಧಿಕಾರಿಗಳ ಮೂಲಕ ನಿಯಂತ್ರಣ ಸಾಧಿಸಿದ್ದರು. ಆದರೆ ಹೈದರಾಲಿ ಅಧಿಕಾರದಲ್ಲಿ ಬಲವಾಗಿ ಪ್ರತಿಷ್ಠಾಪಿತನಾದ ನಂತರ ಮರಾಠರ ನಿಯಂತ್ರಣದಲ್ಲಿದ್ದ ಪಾಳೆಯಟ್ಟುಗಳ ಮೇಲೆ ಆಕ್ರಮಣ ಮಾಡಿ ಅಲ್ಲಿದ್ದ ಅಧಿಕಾರಿಗಳನ್ನೆಲ್ಲಾ ಹೊಡೆದೋಡಿಸಿ ಆ ಪ್ರದೇಶಗಳನ್ನು ತನ್ನ ವಶಕ್ಕೆ ತೆಗೆದುಕೊಂಡನು. ಇಂತಹ ಪ್ರದೇಶಗಳಿಗೆ ಹೈದರಾಲಿ ತನಗೆ ನಿಷ್ಠರಾದವರನ್ನು ಅಧಿಕಾರಿಗಳನ್ನಾಗಿ ಮಾಡಿದ್ದನು. ಕ್ರಿ.ಶ. 1774ರ ವೇಳೆಗೆ ಹೈದರಾಲಿಯು ಮಧುಗಿರಿ, ನಿಡುಗಲ್, ಮಿಡಿಗೇಶಿ ಕೋಟೆಗಳನ್ನು ವಶಪಡಿಸಿಕೊಂಡು ಅವುಗಳ ಆಡಳಿತ ನಿರ್ವಹಣೆಗೆ ಪ್ರಧಾನಿ ವೆಂಕಪ್ಪಯ್ಯನನ್ನು ನೇಮಕ ಮಾಡಿದ್ದನು.

ಪಾವಗಡ ಪಾಳೆಯಪಟ್ಟಿನ ನಾಯಕರು ದೊಡ್ಡತಿಮ್ಮಪ್ಪನಾಯಕನ ಕಾಲದಲ್ಲಿ ಹೈದರಾಲಿಯೊಂದಿಗೆ ಉತ್ತಮ ಭಾಂದವ್ಯವನ್ನು ಇಟ್ಟುಕೊಂಡು ವಾರ್ಷಿಕ 10 ಸಾವಿರ ರೂಗಳ ಕಾಣಿಕೆ ನೀಡುತ್ತಿದ್ದರು. ಆದರೆ ಅವನ ಮರಣದ ನಂತರ ಅವನ ಹಿರಿಯ ಮಗ ಪೆದ್ದತಿಮಪ್ಪನಾಯಕನ ಕಾಲದಲ್ಲಿ ಆ ಸ್ನೇಹ ಭಾಂದವ್ಯ ಮುರಿದುಬಿದ್ದುದೇ ಅಲ್ಲದೆ, ಹೈದರಾಲಿ ಪಾವಗಡವನ್ನು ಹೊರತುಪಡಿಸಿ ಸಿರಾ, ಮಿಡಿಗೇಶಿ, ಮಧುಗಿರಿ, ನಿಡುಗಲ್ ಮುಂತಾದ ಬಲಾಢ್ಯ ಕೋಟೆಗಳನ್ನು ವಶಪಡಿಸಿಕೊಂಡಿದ್ದನು. ಪಾವಗಡವನ್ನು ಗೆದ್ದುಕೊಂಡರೆ ಇಡೀ ಪ್ರದೇಶವೇ ತನ್ನ ವಶವಾಗುತ್ತದೆ ಎಂದು ಆಲೋಚಿಸಿ ತಾನು ಪ್ರದೇಶಗಳಿಗೆ ನಿಯೋಜಿಸಿದ್ದ ಅಧಿಕಾರಿ ಪ್ರಧಾನಿ ವೆಂಕಪ್ಪಯ್ಯನವರಿಗೆ ಪಾವಗಡ ಕೋಟೆಯ ಮೇಲೆ ಆಕ್ರಮಣ ಮಾಡಲು ಆದೇಶಿಸಿದನು. ವೆಂಕಪ್ಪಯ್ಯನು ಸೇನೆಯೊಂದಿಗೆ ಬಲಾಡ್ಯ ಪಾವಗಡದ ಮೇಲೆ ಆಕ್ರಮಣ ಮಾಡಿದನು. 5 ತಿಂಗಳುಗಳ ಕಾಲ ಮುತ್ತಿಗೆ ಮುಂದುವರಿಯಿತು. ಕೋಟೆಯ ಬಾಗಿಲು ತೆರೆಯಲಿಲ್ಲ. ಸತತ ಆಕ್ರಮಣದ ಫಲವಾಗಿ ವೆಂಕಪ್ಪಯ್ಯನ ಸೈನ್ಯ ಕೋಟೆಯೊಳಗೆ ಪ್ರವೇಶಿಸಿತು. ಪಾವಗಡದ ರಕ್ಷಣಾ ಸೈನ್ಯ ದಿಟ್ಟವಾಗಿ ದಾಳಿಯನ್ನೆದುರಿಸಿದರೂ ಫಲ ನೀಡಲಿಲ್ಲ. ಪಾವಗಡದ ಸೈನಿಕರು ಪಲಾಯನಗೈದರು. ಆಕ್ರಮಣಕಾರರು ಅರಮನೆ ಪ್ರವೇಶಿಸಿ ಪೆದ್ದತಿಮ್ಮಪ್ಪ ನಾಯಕ ಮತ್ತು ಅವನ ತಮ್ಮ ಚಿಕ್ಕಪ್ಪಗೌಡ ಚಿಕ್ಕವೆಂಕಟಪತಿನಾಯಕನನ್ನು ಸೆರೆಯಾಳಾಗಿ ಬಂಧಿಸಿದರು. ಅವರ ಇಡೀ ಕುಟುಂಬ ವರ್ಗವನ್ನು ಮಧುಗಿರಿಗೆ ಕರೆದೊಯ್ದು ಅಲ್ಲಿನ ಸೆರೆಮನೆಯಲ್ಲಿ ಇಡಲಾಯಿತು. ನಾಯಕ ಕುಟುಂಬ ವರ್ಗದವರ ಜೀವನಕ್ಕೆ ಪ್ರಧಾನಿ ವೆಂಕಪ್ಪಯ್ಯನು ಒಂದು ಗ್ರಾಮದ ಆದಾಯವನ್ನು ಬಿಟ್ಟುಕೊಟ್ಟನೆಂದು ಆಂಗ್ಲ ಕೈಫಿಯತ್ತು ತಿಳಿಸುತ್ತದೆ.

ಪ್ರಧಾನಿ ವೆಂಕಪ್ಪಯ್ಯನು ಪಾವಗಡಕ್ಕೆ ತೆರಳಿ ಅದರ ಸಂಪೂರ್ಣ ವಿವರವನ್ನು ಸಂಗ್ರಹಿಸಿತೊಡಗಿದನು. ಪಾವಗಡಕ್ಕೆ ಸೇರಿದ್ದ ಅನೇಕ ಹಳ್ಳಿಗಳು ಸಂಸ್ಥಾನಕ್ಕೆ ಸೇರಿದ್ದವು. ಆ ಹಳ್ಳಿಗಳನ್ನು ಬೇರ್ಪಡಿಸಿ ಪುನಃ ಪಾವಗಡಕ್ಕೆ ಸೇರಿಸಿ ಆ ಭೂಪ್ರದೇಶಗಳ ವ್ಯವಹಾರವನ್ನು ನೋಡಿಕೊಳ್ಳಲು ಪ್ರಧಾನಿಯು ಸುಬ್ಬರಾವ್ ಎಂಬುವನನ್ನು ಕ್ರಿ.ಶ. 1775ರಲ್ಲಿ ಅಮಲ್ದಾರನನ್ನಾಗಿ ನೇಮಕ ಮಾಡಿದನು.

ಹೈದರಾಲಿಯು ಮದಕರಿನಾಯಕನನ್ನು ಸದೆಬಡಿಯುವ ಉದ್ದೇಶದಿಂದ ಕ್ರಿ,ಶ. 1777ರಲ್ಲಿ ಮೂರನೆ ಬಾರಿಗೆ ಚಿತ್ರದುರ್ಗದ ಕಡೆ ಹೊರಟನು. ಮಾರ್ಗಮಧ್ಯದಲ್ಲಿ ಹೈದರಾಲಿಯ ಸೈನ್ಯ ಪಾವಗಡದ ಬಳಿ

ಬೀಡುಬಿಟ್ಟಿತು. ಆ ಸಂದರ್ಭದಲ್ಲಿ ಹೈದರನು ತನ್ನ ಸೈನ್ಯದೊಂದಿಗೆ ಪಾವಗಡ ಬೆಟ್ಟವನ್ನು ಏರಿ ಆದರಿಂದ ಆಕರ್ಷಿತನಾಗಿ ಈ ದುರ್ಗವನ್ನು ಬಲಾಢ್ಯವಾದ ಮತ್ತು ಆಯಕಟ್ಟಿನ ಸ್ಥಳವನ್ನಾಗಿ ಮಾಡಿಕೊಳ್ಳಲು ಯೋಚಿಸಿ, ತಕ್ಷಣ ತನ್ನ ಅಧಿಕಾರಿಗಳನ್ನು ಕರೆಸಿ ಈ ದುರ್ಗದ ಮೇಲೆ ಬಲಾಢ್ಯ ಗೋಡೆಗಳನ್ನು ನಿರ್ಮಿಸುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವಂತೆ ಆದೇಶಿಸಿದನು. ಪ್ರಧಾನಿ ವೆಂಕಪ್ಪನು ತಕ್ಷಣ ಈ ಕಾರ್ಯವನ್ನು ಆರಂಭಿಸಿ ಪಾವಗಡ ಕೋಟೆ ಮತ್ತು ಪೇಟೆಯನ್ನು ಬಲಾಢ್ಯಗೊಳಿಸಿದನು. ಹೈದರನ ಆದೇಶದ ಮೇರೆಗೆ ಪಾವಗಡವನ್ನು ಜನಭರಿತ ಪಟ್ಟಣವನ್ನಾಗಿ ಮಾಡಿದನು.

ಕ್ರಿ.ಶ. 1778ರಲ್ಲಿ ಪಾವಗಡವನ್ನು ವಿಸ್ತರಿಸುವ ಉದ್ದೇಶದಿಂದ ಪ್ರಧಾನಿ ವೆಂಕಪ್ಪಯ್ಯನು ರಾಯಚೆರ್ಲ್ಲುವಿನ ಮೇಲೆ ದಾಳಿ ಮಾಡಿದನು. ಅಲ್ಲಿನ ನಾಯಕನಾದ ಯರ್ರ ಚನ್ನಪ್ಪನಾಯ್ಡುವು ಪರಾಭವಗೊಂಡನು. ಅವನನ್ನು ಸೆರೆಹಿಡಿದು ಪೆನುಗೊಂಡೆಯ ದುರ್ಗದಲ್ಲಿಟ್ಟು ಇಡೀ ರಾಯಚೆರ್ಲ್ಲು ಪ್ರದೇಶವನ್ನು ಪಾವಗಡಕ್ಕೆ ಸೇರಿಸಿಕೊಂಡನು. ಹೀಗೆ ಪಾವಗಡ ಮತ್ತಷ್ಟು ವಿಸ್ತಾರಗೊಂಡಿತು. ಕ್ರಿ.ಶ. 1779ರಲ್ಲಿ ಹೈದರಾಲಿಯ ಆದೇಶದ ಮೇರೆಗೆ ಚೇಕ್ರಮಾಯ ಎಂಬ ಅಧಿಕಾರಿಯು ಹೊಸ ಅಮಲ್ದಾರನಾಗಿ ಪಾವಗಡಕ್ಕೆ ಸುಬ್ಬರಾವ್ ನ ಸ್ಥಾನಕ್ಕೆ ಆಗಮಿಸಿದನು. ಅವನ ಆಡಳಿತಾವಧಿಯಲ್ಲಿ ನಿಡುಗಲ್ಲಿಗೆ ಸೇರಿದ್ದ ಪೊನ್ನಸಮುದ್ರ ಮತ್ತು ಸೂಲನಾಯಕನಪಳ್ಳಿಗಳನ್ನು ಒತ್ತಾಯದಿಂದ ಪಡೆದು ಪಾವಗಡಕ್ಕೆ ಸೇರಿಸಿಕೊಂಡನು. ಆಗ ನಿಡುಗಲ್ಲಿನಲ್ಲಿದ್ದ ಪಾಳೇಗಾರ ವೀರತಿಮ್ಮಣ್ಣನಾಯಕನು ದುರ್ಬಲನಾಗಿದ್ದು ಹೈದರಾಲಿಯಿಂದ ಪರಾಭವಗೊಂಡಿದ್ದು ಯಾವುದೇ ಸ್ವತಂತ್ರವಿಲ್ಲದ ಪಾಳೇಗಾರನಾಗಿದ್ದನು. ಆದ್ದರಿಂದ ನಿಡುಗಲ್ಲಿನವರು ಯಾವುದೇ ಪ್ರತಿರೋಧ ಮತ್ತಷ್ಟು ವಿಸ್ತಾರವಾಗಿ ಆದಾಯವೂ ಹೆಚ್ಚಾಯಿತು. ಕ್ರಿ.ಶ. 1782ರಲ್ಲಿ ಹೈದರಾಲಿಯು ಮರಣ ಹೊಂದಿದ ಮೇಲೆ ಮೈಸೂರಿನಲ್ಲಿ ಟಿಪ್ಪೂಸುಲ್ತಾನನು ಅಧಿಕಾರಕ್ಕೆ ಬಂದನು. ಆಗ ಅವನು ಅನೇಕ ಅಧಿಕಾರಿಗಳನ್ನು ಬದಲಾಯಿಸಿ, ತನಗೆ ನಿಷ್ಠರಾದವರನ್ನು ನೇಮಕ ಮಾಡತೊಡಗಿದನು. ಆ ಸಂದರ್ಭದಲ್ಲಿ ಪಾವಗಡಕ್ಕೆ ಕ್ರಿ.ಶ. 1782ರಲ್ಲಿ ರುಸ್ತುಂಖಾನನು ಅಮಲ್ದಾರನಾಗಿ ಆಗಮಿಸಿ ಆಡಳಿತ ಮಾಡತೊಡಗಿದನು.

## ಟಿಪ್ಪೂಸುಲ್ತಾನನ ಆಡಳಿತ

ಪಾವಗಡವು ಸೀಮಿತ ಆದಾಯವನ್ನು ಹೊಂದಿದ್ದು ಚಿಕ್ಕ ಪ್ರದೇಶವಾಗಿತ್ತು. ಹೆಚ್ಚು ವಿಸ್ತಾರವಾಗಿದ್ದ ಪ್ರದೇಶಗಳಿಂದ ಕೆಲವಾರು ಹಳ್ಳಿಗಳನ್ನು ಬೇರ್ಪಡಿಸಿ ಚಿಕ್ಕಪ್ರದೇಶಗಳಿಗೆ ಸೇರಿಸುವ ನೀತಿಯನ್ನು ಹೈದರನು ಅನುಸರಿಸುತ್ತಿದ್ದನು. ಹೈದರಾಲಿಯ ಕಾಲದಲ್ಲಿ ನಿಡುಗಲ್ಲಿನಿಂದ ಕೆಲವಾರು ಹಳ್ಳಿಗಳನ್ನು ಪಾವಗಡಕ್ಕೆ ಸೇರಿಸಿ ವಿಸ್ತರಿಸಲಾಗಿತ್ತು. ಟಿಪ್ಪೂಸುಲ್ತಾನನು ಕೂಡಾ ಇದೇ ನೀತಿಯನ್ನು ಮುಂದುವರೆಸಿ ಪಾವಗಡವನ್ನು ಮತ್ತಷ್ಟು ವಿಸ್ತರಿಸಿ ಅದರ ಆದಾಯವನ್ನು ಹೆಚ್ಚಿಸುವ ಕೆಲಸಕ್ಕೆ ಕೈಹಾಕಿದನು. ಅದರ ಪ್ರಕಾರ ಟಿಪ್ಪೂಸುಲ್ತಾನನು ಪಾವಗಡಕ್ಕೆ ಆಗಮಿಸಿ ಅದರ ಆದಾಯವನ್ನು ಪರಿಶೀಲಿಸಿ ಪಾವಗಡದ ನೆರೆಯ ದೊಡ್ಡ ಪ್ರದೇಶಗಳಾದ ರಾಯದುರ್ಗ ಮತ್ತು ಪೆನುಗೊಂಡೆಯಿಂದ ಕೆಲವು ಭೂಪ್ರದೇಶವನ್ನು ಪಾವಗಡಕ್ಕೆ ಸೇರಿಸಬೇಕೆಂಬ ಆದೇಶವನ್ನು ಹೊರಡಿಸಿದನು. ಈ ವೇಳೆಗಾಗಲೇ ರಾಯದುರ್ಗ ಮತ್ತು ಪೆನುಗೊಂಡೆ ಟಿಪ್ಪೂಸುಲ್ತಾನನ ವಶದಲ್ಲಿದ್ದವು. ಆ ಆದೇಶದ ಪ್ರಕಾರ "ಪೆನುಗೊಂಡ (ಸೀಮೆ) ಪ್ರದೇಶದಿಂದ ರೊದ್ದಂ ತರಫ್ ನ್ನು ರಾಯದುರ್ಗ ಪ್ರದೇಶದಿಂದ (ಸೀಮೆ) ತಿರುಮಣಿ ತರಫ್ ನ್ನು ಪಾವಗಡ ಸೀಮೆಗೆ ಸೇರಿಸಲಾಯಿತು." ಪಾವಗಡ ನಾಯಕರಿಂದ ದುರ್ಗದ ಮೇಲೆ ನಿರ್ಮಾಣಗೊಂಡಿದ್ದ ಗೋಪಾಲಸ್ವಾಮಿ ದೇವಾಲಯವನ್ನು ಜೀರ್ಣೋದ್ಧಾರದ ನೆಪದಲ್ಲಿ ನಾಶಪಡಿಸಲಾಯಿತು. ಈ ಘಟನೆ ಕ್ರಿ.ಶ. 1787ರಲ್ಲಿ ನಡೆಯಿತೆಂದು ಆಂಗ್ಲ ಕೈಫಿಯತ್ತು ದಾಖಲಿಸಿದೆ.

ಕ್ರಿ.ಶ. 1787ರ ನಂತರ ಕೆಲವಾರು ದಿನಗಳ ಕಾಲ ಈ ಮೂರು ತರಫ್ ಗಳ ಜವಾಬ್ದಾರಿಯನ್ನು ರುಸ್ತುಂಖಾನನು ನಿರ್ವಹಿಸಿದನು. ನಂತರ ಪುನಃ ಪಾವಗಡದಿಂದ ರೊದ್ದಂ ತರಫ್ ನ್ನು ಬೇರ್ಪಡಿಸಿ ಅಲ್ಲಿಗೆ ಪ್ರತ್ಯೇಕವಾದ ಅಧಿಕಾರಿಯನ್ನು ನೇಮಿಸಲಾಯಿತು. ಆದರೆ ರೊದ್ದಂ ತರಫ್ ನಲ್ಲಿದ್ದ ಯರ್ಾಪ್ಟೆ ಮತ್ತು ಹೊನ್ನಾಪುರ ಎಂಬ ಗ್ರಾಮಗಳನ್ನು ಪಾವಗಡ ಸೀಮೆಯಲ್ಲಿಯೇ ಉಳಿಸಿಕೊಳ್ಳಲಾಯಿತು.

ಬ್ರಿಟೀಷರ ಒಕ್ಕೂಟ ಸೈನ್ಯ ಲಾರ್ಡ್ ಕಾರನ್ ವಾಲೀಸನ ನಾಯಕತ್ವದಲ್ಲಿ ಟಿಪ್ಪೂವಿನ ವಿರುದ್ಧ ಯುದ್ಧ ಮಾಡಲು ಕ್ರಿ.ಶ. 1790ರಲ್ಲಿ ಬೆಂಗಳೂರಿಗೆ ಬಂದಿಳಿಯಿತು. ಕಾರನ್ ವಾಲೀಸನ ಜೊತೆ ಜನರಲ್ ಮಿಡೋನೋ ಆಗಮಿಸಿದ್ದನು. ಟಿಪ್ಪೂ ಮತ್ತು ಅವನ ಅಧಿಕಾರಿಗಳು ಬ್ರಿಟೀಷರ ವಿರುದ್ಧದ ದುರ್ಗದ ಬಂಧಿಖಾನೆಯಲ್ಲಿದ್ದ ಪಾವಗಡದ ಪಾಳೇಗಾರ ಪೆದ್ದತಿಮ್ಮಪ್ಪನಾಯಕನು (ಪ್ರಧಾನಿ ವೆಂಕಪ್ಪಯ್ಯನು ಬಂಧಿಸಿ ಮಧುಗಿರಿಯಲ್ಲಿಟ್ಟಿದ್ದನು). ಜೈಲಿನಿಂದ ಬಿಡುಗಡೆಯಾಗಿ ಪಾವಗಡಕ್ಕೆ ಬಂದು ಕೋಟೆಯನ್ನು ಬಿಟ್ಟು ಇನ್ನುಳಿದ ಪ್ರದೇಶಗಳನ್ನು ಆಳತೊಡಗಿದನು. ಸುಮಾರು ಒಂದು ವರ್ಷಕಾಲ ಅಧಿಕಾರ ಮಾಡಿ ಇನ್ನೇನು ಕೋಟೆಯನ್ನು ಆಕ್ರಮಿಸಿಕೊಳ್ಳುವ ಸನಿಹಲ್ಲಿರುವಾಗಲೇ ಟಿಪ್ಪೂಸುಲ್ತಾನ್ ಸೋತು ಬ್ರಿಟೀಷರೊಂದಿಗೆ ಶಾಂತಿ ಒಪ್ಪಂದ ಮಾಡಿಕೊಂಡಿದ್ದನು. ಎರಡೂ ಕಡೆಯು ಸೈನ್ಯ ತಮ್ಮ ಸ್ಥಾನಗಳಿಗೆ ಹಿಂತಿರುಗಿದ ನಂತರ ಟಿಪ್ಪುಸುಲ್ತಾನನಿಗೆ ಪಾವಗಡ ತನ್ನ ಕೈಬಿಟ್ಟುಹೋಗಿರುವ ಸುದ್ದಿ ತಿಳಿಯಿತು. ಬ್ರಿಟೀಷರಿಗೆ ಕೊಡಬೇಕಾಗಿದ್ದ ಹಣವನ್ನು ಕ್ರೂಡೀಕರಿಸಲು ಪುನಃ ಸಣ್ಣಪುಟ್ಟ ಪಾಳೇಗಾರರ ಮೇಲೆ ಆಕ್ರಮಣ ಮಾಡಬೇಕಾಯಿತು. ಆದ್ದರಿಂದ ಕೈಬಿಟ್ಟುಹೋಗಿದ್ದ ಪಾವಗಡವನ್ನು ಆಕ್ರಮಿಸಲು ಸೈನ್ಯವನ್ನು ಕಳುಹಿಸಿದನು. ಟಿಪ್ಪೂಸುಲ್ತಾನನ ಸೇನೆ ಬರುತ್ತಿರುವ ಸುದ್ದಿಯನ್ನು ಕೇಳಿದ ಪಾವಗಡದ ಪೆದ್ದತಿಮ್ಮಪ್ಪನಾಯಕನು ಪಾವಗಡ ಪ್ರದೇಶವನ್ನು ಬಿಟ್ಟು ಪಲಾಯನ ಮಾಡಿದನು. ಟಿಪ್ಪೂ ಸೈನ್ಯ ಪಾವಗಡವನ್ನು ಪ್ರವೇಶಿಸಿ ವಶಪಡಿಸಿಕೊಂಡಿತು. ಅವನ ಅಧಿಕಾರಿಗಳು ಯಶಸ್ವಿಯಾಗಿ ಪಾವಗಡ ಪ್ರದೇಶದ ಆಡಳಿತವನ್ನು 1799ರವರೆಗೆ ನಿರ್ವಹಣೆ ಮಾಡಿದರು. ಈ ಮಧ್ಯೆ ಟಿಪ್ಪೂಸುಲ್ತಾನನು ಪಾವಗಡ ಕೋಟೆಯ ವೀಕ್ಷಣೆಗೆ ಕ್ರಿ,ಶ. 1795ರಲ್ಲಿ ಆಗಮಿಸಿದನು. ಕೋಟೆಯ ಬಲಾಢ್ಯತೆಯನ್ನು ನೋಡಿ ಸಂತೋಷಗೊಂಡ ಅವನು ಆ ದುರ್ಗಕ್ಕೆ 'ಫತೇಹಬಾದ್' ಎಂದು ನಾಮಕರಣ ಮಾಡಿದನು.

## ಉಪಸಂಹಾರ

ಕ್ರಿ.ಶ. 1799ರಲ್ಲಿ ಬ್ರಿಟೀಷರೊಂದಿಗೆ ನಡೆದ ಯುದ್ಧದಲ್ಲಿ ಟಿಪ್ಪೂಸುಲ್ತಾನನು ಸೋತು ಮರಣ ಹೊಂದಿದನು. ಟಿಪ್ಪೂವಿನ ಮರಣದ ವಾರ್ತೆಯಿಂದ ಎಚ್ಚೆತ್ತುಕೊಂಡ ಪಾವಗಡ ಪಾಳೇಗಾರ ಪೆದ್ದತಿಮ್ಮಪ್ಪನಾಯಕನು ಕರ್ನಲ್ ಅಲೆಕ್ಸಾಂಡರ್ ರೀಡ್‌ನನ್ನು ಬೇಟಿಯಾಗಿ ಅವನ ಅನುಮತಿಯನ್ನು ಪಡೆದುಕೊಂಡು ಪಾವಗಡ ಪ್ರದೇಶದ ಆಡಳಿತವನ್ನು ವಹಿಸಿಕೊಂಡು ಎರಡು ತಿಂಗಳ ಕಾಲ ನಿರ್ವಹಿಸಿದನು. ಟಿಪ್ಪೂವನ್ನು ಸೋಲಿಸಿದ ಬ್ರಿಟೀಷರು ಮೈಸೂರು ಮಹಾರಾಜರಿಗೆ ತಾವುಗೆದ್ದ ಪ್ರದೇಶಗಳನ್ನು ಬಿಟ್ಟುಕೊಟ್ಟು, ಉಸ್ತುವಾರಿಗೆ ಮೈಸೂರಿನಲ್ಲಿ ರೀಜೆಂಟನನ್ನು ನೇಮಿಸಿದರು. ಮಹಾರಾಜರಿಗೆ ಅಧಿಕಾರ ಬಂದ ನಂತರ ಪೂರ್ಣಯ್ಯನವರು ಪುನಃ ಮೈಸೂರು ದಿವಾನರಾದರು. ಅವರು ತಮ್ಮ ಹರಿಕಾರರ ಮೂಲಕ ಪಾವಗಡ ಪ್ರದೇಶದ ಅಧಿಕಾರವನ್ನು ತಮ್ಮ ಅಧಿಕಾರಿಗಳಿಗೆ ಬಿಟ್ಟುಕೊಡುವಂತೆ ಪಾಳೇಗಾರರಿಗೆ ಆದೇಶ ಪತ್ರವನ್ನು ಕಳುಹಿಸಿದರು. ಈ ಆದೇಶವನ್ನು ಜಾರಿಗೊಳಿಸಲು ಪೂರ್ಣಯ್ಯನವರು ಕರ್ನಲ್ ಟಾಲ್ ಫ್ರೆ ಜೊತೆ ತಿಮ್ಮಾಜಿ ಪಂತಲುವಿನ ನೇತೃತ್ವದಲ್ಲಿ ಚಿಕ್ಕಸೈನ್ಯವನ್ನು ಕೂಡಾ ಕಳುಹಿಸಿದನು. ನಿರಾಶನಾದ ಪಾಳೇಗಾರ ಪೂರ್ಣಯ್ಯನವರ ಬಳಿ ಹೋದರೂ ಪ್ರಯೋಜನವಾಗಲಿಲ್ಲ. ಕೊನೆಗೆ ಅವನಿಗೆ ವಿಶ್ರಾಂತಿ ವೇತನ ನೀಡಲಾಯಿತು. ಮುಮ್ಮಡಿ ಕೃಷ್ಣರಾಜ ಒಡೆಯರ ಆದೇಶದ ಮೇರೆಗೆ ಪೂರ್ಣಯ್ಯನವರು ಪಾವಗಡಕ್ಕೆ ಅಮಲ್ದಾರರನ್ನು ನೇಮಕ ಮಾಡುವುದರ ಮೂಲಕ ಆಡಳಿತವನ್ನು ನಡೆಸಿದರು. ಹೀಗೆ ಪಾವಗಡ ಮೈಸೂರು ಮಹಾರಾಜರ ಆಡಳಿತಕ್ಕೆ ಒಳಪಟ್ಟಿತು.

## ಅಡಿ ಟಿಪ್ಪಣಿ

[1] ಡಾ ಡಿ.ಎನ್. ಯೋಗಿಶ್ವರಪ್ಪ, ಕಲ್ಪಶೋಧ ಪುಟ 224-234, ಪ್ರಗತಿ ಪ್ರಕಾಶನ, ಬೆಂಗಳೂರು 2012.
[2] ಮೆಂಕಜಿಯವರ ಅಪ್ರಕಟಿತ ಆಂಗ್ಲ ಕೈಫಿಯಿತ್ತು (1801)
[3] ಮೆಕಂಜಿ ಅಪ್ರಕಟಿತ ಇಂಗ್ಲೀಷ್ ದಾಖಲೆ 1801.